ಪ್ರಕಟಣೆ

ವಿಧಾನ ಮಂಡಲದ ಕಾರ್ಯನಿರ್ವಹಣೆಯ ಬಗ್ಗೆ ಸಾಕ್ಷ್ಯ ಚಿತ್ರ ತಯಾರಿಕೆ

ಅಧ್ಯಕ್ಷರು.—ವಿಧಾನ ಮಂಡಲದ ಕಾರ್ಯನಿರ್ವಹಣೆಯ ಬಗ್ಗೆ ಒಂದು ಸಾಕ್ಷ್ಯಚಿತ್ರವನ್ನು ತಯಾರಿಸಲು ಈ ಸಭೆಯ ಕಾರ್ಯಕ್ರಮದ ಕೆಲವುಸಂದರ್ಭಗಳ ಚಿತ್ರೀಕರಣ ಮಾಡಲು ನಾನು ಅನುಮತಿ ನೀಡಿದ್ದೇನೆ. ಚಿತ್ರೀಕರಣವಾದ ನಂತರ ಅದನ್ನು ನನಗೆ ತೋರಿಸಿ ಅನಂತರ ಆ ಚಿತ್ರವನ್ನು ಅಂತಿಮವಾಗಿ ತಯಾರಿಸಲಾಗುವುದು. ಇದನ್ನು ಮಾನ್ಯ ಸದಸ್ಯರ ಗಮನಕ್ಕೆ ತರಲಾಗಿದೆ.

ವರದಿಗಳನ್ನೊಪ್ಪಿಸುವುದು

ಶ್ರೀ ಕೆ. ಎಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೆ, ಶಿಕ್ಷಣ ಇಲಾಖೆ, ಸಹಕಾರ ಇಲಾಖೆ ಲೋಕೋಪಯೋಗಿ ಇಲಾಖೆ ಹಾಗೂ ಆಹಾರ ಮತ್ತು ನಾಗರಿಕ ಇಲಾಖೆಗಳಿಗೆ ಸಂಬಂಧಿಸಿದಂತೆ ನನ್ನ ಹೆಸರಿನ ಮುಂದೆ ಇರುವ ಸಾರ್ವಜನಿಕ ಲೆಕ್ಕ ಪತ್ರಗಳ ಸಮಿತಿಯ ವರದಿಗಳನ್ನು ಸದನಕ್ಕೆ ಒಪ್ಪಿಸುತ್ತೇನೆ

ಅಧ್ಯಕ್ಷರು.—ವರದಿಗಳನ್ನು ಒಪ್ಪಿಸಲಾಯಿತು.

ಶ್ರೀ ಎಂ ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೆ, ಶ್ರೀ ರಮೇಶ್ ಕುಮಾರ್ ಅವರ ಹೆಸರಿನ ಮುಂದೆ ಇರುವ ಸಾರ್ವಜನಿಕ ಉದ್ದಿಮೆಗಳ ಸಮಿತಿಯ ವರದಿಯನ್ನು ಸದನಕ್ಕೆ ಒಪ್ಪಿಸುತ್ತೇನೆ.

ಅಧ್ಯಕ್ಷರು.—ವರದಿಯನ್ನು ಒಪ್ಪಿಸಲಾಯಿತು.

ಕಾರ್ಯದರ್ಶಿಯವರ ವರದಿ

ಕಾರ್ಯದರ್ಶಿಯವರು.—ಮಾನ್ಯ ಅಧ್ಯಕ್ಷರೆ, ಕಳೆದ ವರದಿಯ ನಂತರ ರಾಜ್ಯಪಾಲರಿಂದ ಅಥವಾ ರಾಷ್ಟ್ರಾಧ್ಯಕ್ಷರಿಂದ ಒಪ್ಪಿಗೆ ಪಡೆಯಲಾದ ವಿಧೇಯಕಗಳ ಪಟ್ಟಿಯನ್ನು ಸಭೆಯ ಮುಂದೆ ಇಡುತ್ತೇನೆ,

ಅಧ್ಯಕ್ಷರು.—ಕಾರ್ಯದರ್ಶಿಯವರಿಂದ ವಿಧೇಯಕಗಳ ಪಟ್ಟಿಯನ್ನು ಮಂಡಿಸಲಾಯಿತು.

Sl. No	Name of the Bill	Date of Assent	Assented by
	2	3	4
1	The Karnataka Officers Viliage (Amendment) Bill, 1987	21-11-1986	Governor
2	The Karnataka Societies Registration (Amendment) Bill, 1986	,,	,,
3	The Karnataka Public Premises (Eviction of Unauthorised Occupation) (Amendment) Bill, 1986	19-2-1986	,,
4	The Indian Partnership (Karnataka Amendment) Bill, 1986	12-2-1987	President
5	The Karnataka Entertainments Tax (Amendment) Bill, 1987	6-3-1987	Governor